ESTD: 1991 K.P. E. Society's Ph.No.08482-229892

**SIDDHARTH ARTS AND COMMERCE DEGREE COLLEGE**

**Janwada Road, Bidar-585 401.**

**KPES/SACC/BDR/NSS/2025-26** **Date : 24-09-2025**

# ರಾಷ್ಟ್ರೀಯ ಸೇವಾ ಯೋಜನೆಯ ದಿನಾಚರಣೆ

**ದಿನಾಂಕ 24–09–2025** **ಸ್ಥಳ : ಸೆಮಿನಾರ್ ಹಾಲ್**

| | | |
|---|---|---|
| ಬುದ್ಧ ವಂದನೆ | : | ಕುಮಾರಿ ಪಲ್ಲವಿ, ಮೇಘಾ ಸಂಗಡಿಗರು |
| ಸ್ವಾಗತ | : | ಮಾಣಿಕರಾವ ಭಾಲ್ಕೆ |
| ಮುಖ್ಯ ಅತಿಥಿ | : | ಜಗನ್ನಾಥ ಬಡಿಗೇರ್<br>ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ |
| ಗೌರವ ಉಪಸ್ಥಿತಿ | : | ಜಗದೇವಪ್ಪಾ ಚೆಕ್ಕಿ ಉಪ ಪ್ರಾಚಾರ್ಯರು |
| ಅಧ್ಯಕ್ಷತೆ | : | ಗೋಪಾಲ ಬಡಿಗೇರ್ |
| ವಂದನಾರ್ಪಣೆ | : | ಬಸವರಾಜ ಸ್ವಾಮಿ |
| ನಿರೂಪಣೆ | : | ರಾಜಕುಮಾರ ಸಿಂಧೆ |

ESTD: 1991 K.P. E. Society's Ph.No.08482-229892

**SIDDHARTH ARTS AND COMMERCE DEGREE COLLEGE**

**Janwada Road, Bidar-585 401.**

**KPES/SACC/BDR/NSS/2025-26** **Date : 24-09-2025**

# ರಾಷ್ಟ್ರೀಯ ಸೇವಾ ಯೋಜನೆಯ ದಿನಾಚರಣೆ

## ಅಪೇಕ್ಷಿತವಾದದ್ದು ಕರ್ತವ್ಯ, ನಿರಪೇಕ್ಷಿತವಾದದ್ದು ಸೇವೆ–ಪ್ರೊ. ಜಗನ್ನಾಥ ಬಡಿಗೇರ್

ಬದುಕಿನಲ್ಲಿ ಯಾವುದೇ ಕಾರ್ಯವು ಫಲಾಪೇಕ್ಷಿತವಾಗಿದ್ದರೆ ಅದು ಕರ್ತವ್ಯ ಎನಿಸಿಕೊಳ್ಳುತ್ತದೆ. ನಿರಪೇಕ್ಷಿತವಾಗಿದ್ದರೆ ಅದುವೇ ಸೇವೆ ಎನಿಸಿಕೊಳ್ಳುತ್ತದೆ. ಪ್ರತಿಯೊಬ್ಬರು ಈ ಪ್ರಜ್ಞೆಯನ್ನಿಟ್ಟುಕೊಂಡು ಕಾರ್ಯ ಮುಂದುವರೆಸಬೇಕೆಂದು ಎಂದು ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಜಗನ್ನಾಥ ಬಡಿಗೇರ್ ಅವರು ನುಡಿದರು.

ಇಂದು ದಿನಾಂಕ 24–09–2025ರಂದು ಸಿದ್ದಾರ್ಥ ಕಲಾ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು ಕರ್ತವ್ಯ ಮತ್ತು ಸೇವೆ ಇವೆರಡು ಜೀವನದಲ್ಲಿ ಮಹತ್ವದ ಕಾರ್ಯಗಳಾಗಿವೆ. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಲಿ ಸೇವಾ ಮನೋಭಾವನೆ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷೀಯವಾಗಿ ಮಾತನಾಡಿದ ಉಪ ಪ್ರಾಚಾರ್ಯರಾದ ಜಗದೇವಪ್ಪ ಚೆಕ್ಕಿಯವರು ಮಾತನಾಡಿ ಎನ್ ಎಸ್ ಎಸ್ ಧ್ಯೇಯೋದ್ದೇಶಗಳನ್ನು ಕುರಿತು ವಿವರಿಸಿದರು. ಕುಮಾರಿ ಪಲ್ಲವಿ ಸಂಗಡಿಗರು ಪ್ರಾರ್ಥನೆ ನಡೆಸಿಕೊಟ್ಟರು. ಇತಿಹಾಸ ವಿಭಾಗದ ಮುಖ್ಯಸ್ಥರಾದ ಮಾಣಿಕರಾವ ಭಾಲ್ಕೆಯವರು ಸರ್ವರನ್ನು ಸ್ವಾಗತ ಕೋರಿದರು. ಕೊನೆಯಲ್ಲಿ ಸಾಂಸ್ಕೃತಿಕ ವಿಭಾಗದ ಸಂಯೋಜಕರಾದ ಬಸವರಾಜ ಸ್ವಾಮಿಯವರು ವಂದಿಸಿದರು. ಕಾಲೇಜಿನ ಎಲ್ಲ ಬೋಧಕ ಮತ್ತು ಭೋಧಕೇತರ ಸಿಬ್ಬಂದಿಗಳು ಹಾಗೂ ಎನ್ ಎಸ್ ಎಸ್‌ನ ಎಲ್ಲ ವಿದ್ಯಾರ್ಥಿಗಳು ಹಾಜರಿದ್ದರು. ಎನ್ ಎಸ್ ಎಸ್ ಸಂಯೋಜನಾಧಿಕಾರಿಗಳಾದ ರಾಜಕುಮಾರ ಸಿಂಧೆಯವರು ಕಾರ್ಯಕ್ರಮವನ್ನು ನಿರೂಪಿಸಿದರು.

ಎನ್ ಎಸ್ ಎಸ್ ಸಂಯೋಜನಾಧಿಕಾರಿಗಳು ಪ್ರಾಚಾರ್ಯರು

# ದಿನಾಂಕ 24–09–2025ರಂದು ಆಚರಿಸಲಾದ ಎನ್.ಎಸ್.ಎಸ್ ದಿನಾಚರಣೆ ಕಾರ್ಯಕ್ರಮದಲ್ಲಿ ತೆಗೆಯಲಾದ ಸಾಂದರ್ಭಿಕ ಚಿತ್ರಗಳು




























